ಶ್ರೀ ಭೀಮಣ್ಣ ಖಂಡ್ರೆ—ತಾವು ಉತ್ತರದಲ್ಲಿ ೧೨೪ ಗ್ರಾಮಗಳಿಗೆ ಇನ್ನೂ ವಿದ್ಯುತ್ತೀಕರಣಗೊಳಿಸ ಬೇಕಾಗಿದೆ ಎಂದು ಹೇಳುತ್ತೀರಿ. ಆದರೆ ನಾನು ೨೨೪ ಪಳ್ಳಿಗಳು ಎಂದು ಪೇಳುತ್ತಿದ್ದೇನೆ. ಈ ರೀತಿ ತಪ್ಪು ಮಾಹಿತಿ ಏತಕ್ಕೆ ಕೊಟ್ಟಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್ -ಅದನ್ನು ಸರಿಯಾಗಿ ಪರಿಶೀಲನೆ ಮಾಡಿ ತಮಗೆ ಸರಿಯಾದ ಹಾಗೂ ನಿಖರವಾದ ಮಾಹಿತಿಯನ್ನು ಒದಗಿಸುತ್ತೇನೆ.

1-30 P.M.

Suspension of Collection of water rate and Betterment Levy on T.B P. dry-*cum*-wet Lands,

447 SRI B. E. RAMAIAH (Siruguppa)—Will the Chief Minister be pleased to state :—

(a) whether the Government is aware that water is not given to the 20,000 acres of Dry-*cum* Wet lands under TBP in Bellary District ;

(b) whether the Government is aware that the water rate and betterment levy are demanded by Government, even though water has not been supplied ;

(c) whether the Government intend to take immediate steps to suspend collection of water rate and betterment levy ?

SRI D. DEVARAJ URS (Chief Minister)—

(a) The total quantity of water as stipulated has been supplied to the Dry-*cum*-Wet area under low level canal in Bellary District and area actually irrigate is 35645 acres during 1977-78 as against localised area of 58545 acres. Hence utilisation of water to an area of about 23,000 acres has not been made by irrigaters due to following reasons :

1. Non levelling of lands.
2. Non-utilising of water generally during night time.
3. Shifting of Rabi period (November to February) to summer period January to April to introduce block system.
4. Large holdings.
5. Absentee land-holders.
6. Non-cultivation of lands belonging to charitable trusts like temples etc.
7. Un-authorised irrigation.
8. Violation of cropping pattern.

(b) Water rate is being levied whenever water is made available. Instances where betterment levy is levied even though water was not made available to the lands have not come to the notice.

(c) Government have issued orders under their circular No. RD 45 EWR 79, dated 8th February 1979 directing not to recover water rate in respect of lands to which water is not actually made available. Accordingly water rate for 78-79 is being levied based on Joint inspection by Revenue and Irrigation Department Officers.

ಶ್ರೀ ಡಿ. ನಾರಾಯಣದಾಸ್—ತಮ್ಮ ಉತ್ತರದಲ್ಲಿ ೨೩ ಸಾವಿರ ಎಕರೆಗಳಿಗೆ ನೀರನ್ನು ಕೊಡುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳಿದ್ದೀರಿ. ಈಗ ಅಲ್ಲಿ ನೀರನ್ನು ಕೊಡದೆ ಇರುವುದಕ್ಕೆ ತಾವು ಸುಮಾರು ೮ ಕಾರಣಗಳನ್ನು ಕೊಟ್ಟಿದ್ದೀರಿ. ಆದರೆ ೨೩ ಸಾವಿರ ಎಕರೆಗೆ ನೀರನ್ನು ಒದಗಿಸಬೇಕಾದರೆ ಅಲ್ಲಿ ಫೀಡರ್ ಚಾನಲನ್ನು ಮಾಡಿಲ್ಲ, ಆದ್ದರಿಂದ ನೀರನ್ನು ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಏನಾದರೂ ಬಂದಿದೆಯೇ ?

† ಶ್ರೀ ಡಿ. ದೇವರಾಜ ಅರಸ್—ಕೊಟ್ಟಿರುವ ಕಾರಣಗಳನ್ನು ತಾವು ಓದಿಕೊಳ್ಳಿ. ಗೊತ್ತಾಗುತ್ತದೆ. ನೀರನ್ನು ಕೊಡುವುದಕ್ಕಾಗುವುದಿಲ್ಲ ಎಂಬ ಉತ್ತರ ಅಲ್ಲ, ನೀರನ್ನು ಉಪಯೋಗಿಸಿಕೊಳ್ಳುತ್ತಿಲ್ಲ. ನೀರು ಇದ್ದೂ ಉಪಯೋಗಿಸಿಕೊಳ್ಳುತ್ತಿಲ್ಲ. ನೀರು ಇಲ್ಲದೇ ಇದ್ದರೆ ಆ ಮಾತು ಬೇರೆ. ನೀರು ಇದ್ದೂ ಉಪಯೋಗಿಸಿಕೊಳ್ಳುತ್ತಿಲ್ಲ ಎಂದುದಕ್ಕೆ ಇಂತಿಂತ ಕಾರಣಗಳು ಎಂಬುದಾಗಿ ಕೊಟ್ಟಿದ್ದೇವೆ.

ಶ್ರೀ ಡಿ. ನಾರಾಯಣದಾಸ್—ಅಲ್ಲಿ ಫೀಡರ್ ಚಾನಲ್ ಮಾಡಿದ್ದರೆ ಇರುವುದರಿಂದ ನೀರನ್ನು ಉಪಯೋಗಿಸಿಕೊಳ್ಳಲಾಗುತ್ತಿಲ್ಲ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಡಿ. ದೇವರಾಜ ಅರಸ್—ಅದು ಒಂದು ಕಾರಣ ಇದ್ದರೂ ಇರಬಹುದು. ತಾವು ಈಗ ಹೇಳುತ್ತಿದ್ದೀರಿ ಅದನ್ನು ನೋಡೋಣ ;

ಶ್ರೀ ಡಿ. ನಾರಾಯಣದಾಸ್—ಬಗರ್ ಹುಕ್ಕುಂ ಮಾಡಿ ಅನೇಕ ಜನರು ವ್ಯವಸಾಯುವನ್ನು ಮಾಡುತ್ತಿರುವುದರಿಂದ ಟೇಲ್ ಎಂಡ್‌ನಲ್ಲಿರತಕ್ಕ ಜಮೀನುದಾರರಿಗೆ ನೀರಾವರಿಗೆ ನೀರನ್ನು ಒದಗಿಸಲಾಗುತ್ತಿಲ್ಲ. ಆದ್ದರಿಂದ ಬಗರ್ ಹುಕ್ಕುಂ ಮಾಡಿಕೊಂಡವರನ್ನು ತಪ್ಪಿಸಿ ಟೇಲ್ ಎಂಡ್‌ನಲ್ಲಿರತಕ್ಕಂತ ಹವರಿಗೂ ನೀರನ್ನು ಒದಗಿಸಿಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್—ಬಗರ್ ಹುಕ್ಕುಂ ಮಾಡಿಕೊಂಡಿರುವವರಿಗೆ ಅದನ್ನು ರೆಗ್ಯುಲರೈಸ್ ಮಾಡಬೇಕೋ ಅಥವಾ ಅವರನ್ನು ಅಲ್ಲಿಂದ ಖಾಲಿ ಮಾಡಿಸಬೇಕೋ ಎಂಬುದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಆದಷ್ಟು ಬೇಗ ಇದರ ಬಗ್ಗೆ ಏನಾದರೂ ಒಂದು ತೀರ್ಮಾನ ಮಾಡಬೇಕೆಂಬ ಯೋಜನೆ ಕೂಡ ಸರ್ಕಾರದಲ್ಲಿದೆ.

ಶ್ರೀ ಡಿ, ನಾರಾಯಣದಾಸ್—ಈ ಲ್ಯಾಂಡ್ ಅವರಿಗೆ ರೆಗ್ಯುಲರೈಸ್ ಆಗದೆ ಇದ್ದರೂ ಸುಮಾರು ೨೦-೨೫ ವರ್ಷಗಳಿಂದ ಅವರಿಗೆಲ್ಲಾ ವಾಟರ್ ರೇಟ್, ಬೆಟರ್‌ಮೆಂಟ್ ಲೆವಿ ಹಾಕಿದ್ದಾರೆ. ಅವರು ಅವರ ಹೊಲಗಳನ್ನು ಪಾಳುಬಿದ್ದರೂ ಕೂಡ ತಾವು ಹಾಕಿರುವಂತಹ ಬಾಕಿಯನ್ನು ಕಟ್ಟುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ಸರಿಯಾಗಿ ತನಿಖೆ ಮಾಡಿಸಿ ಯಾರು ನೀರನ್ನು ಉಪಯೋಗ ಮಾಡಿಕೊಂಡಿದ್ದಾರೆ, ಯಾರು ನೀರನ್ನು ಉಪಯೋಗ ಮಾಡಿಕೊಂಡಿಲ್ಲ ಎಂಬ ಬಗ್ಗೆ ವಿಚಾರಣೆ ಮಾಡಿ ನೀರನ್ನು ಉಪಯೋಗ ಮಾಡದೆ ಇದ್ದವರ ಮೇಲೆ ಹಾಕಿರುವಂತಹ ವಾಟರ್ ರೇಟನ್ನು ಹಾಗೂ ಬೆಟರ್‌ಮೆಂಟ್ ಲೆವಿಯನ್ನು ವಜಾ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್—ಇದರ ಬಗ್ಗೆ ತಾವು ಬೇಡಿದ ಹಾಗೆ ಒಂದು ಗ್ರಿವೆನ್ಸ್ ಸಸ್ಕಮಿಟಿಯನ್ನು ಮಾಡಿದ್ದೇವೆ. ಅವರು ಇದರ ಬಗ್ಗೆ ಅಧ್ಯಯನ ಮಾಡಿ ವರದಿಯನ್ನು ಕೊಡಬೇಕೆಂದೂ ಕೂಡ ತಿಳಿಸಿದ್ದೇವೆ. ಆದರ ಪ್ರಕಾರ ನೀರು ಒದಗದೆ ಇರತಕ್ಕಂತಹ ಜಮೀನು ೧೯೮೮-೮೯ನೇ ಸಾಲಿನಲ್ಲಿ ಯಾವ್ಯಾವುದರೆ, ಬಳ್ಳಾರಿಯಲ್ಲಿ ೧೫.೬೭೬ ಎಕರೆ, ಶಿರಗುಪ್ಪದಲ್ಲಿ ೧,೬೪೫ ಎಕರೆ ತಿಪಟೂರು ತಾಲ್ಲೂಕಿನಲ್ಲಿ ೨೯ ಎಕರೆ ಹಾಗೂ ಹೊಸಪೇಟೆಯಲ್ಲಿ ೬೫೦ ಎಕರೆ ಒಟ್ಟು ೧೬,೦೯೮ ಎಕರೆಗಳಿಗೆ ನೀರನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳಿದ್ದಾರೆ. ಆ ಗ್ರಿವೆನ್ಸೆಸ್ ಕಮಿಟಿಯು ಮತ್ತೊಂದು ವರದಿ ಬರುತ್ತಾ ಇದೆ. ಯಾವ ಜಮೀನುದಾರರಿಗೆ ನೀರನ್ನು ಒದಗಿಸಿಕೊಟ್ಟಿಲ್ಲ. ಆಂತಹವರಿಂದ ವಾಟರ್ ರೇಟ್

ಮತ್ತು ಬೆಟರ್‌ಮೆಂಟ್ ಲೆವಿಯನ್ನು ತೆಗೆದುಕೊಳ್ಳಬೇಡಿ ಎಂಬುದಾಗಿ ಸರ್ಕಾರದಿಂದ ಒಂದು ಸುತ್ತೋಲೆಯನ್ನು ೮-೨-೭೯ ರಂದು ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಡಿ. ನಾರಾಯಣದಾಸ್—ಹಿಂದಿನ ೨೦-೨೫ ವರ್ಷಗಳಿಂದಲೂ ಅವರಿಗೆ ಹಾಕಿರತಕ್ಕಂತಹ ವಾಟರ್‌ರೇಟ್ ಮತ್ತು ಬೆಟರ್‌ಮೆಂಟ್ ಲೆವಿಯನ್ನು ಪೂರ್ತಾ ವಜಾ ಮಾಡುವುದಕ್ಕೆ ತಾವು ಏನಾದರೂ ಒಂದು ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್—ಗ್ರಿವೆನ್ಸ್ ಕಮಿಟಿಯವರ ಪೂರ್ತ ವರದಿ ಬರಲಿ. ಆಮೇಲೆ ನೋಡೋಣ.

Glucose producing unit at Shimoga

800 SRI KADIDAL DIVAKAR (Thirthahalli)—Will the Minister for Health and Family Welfare be pleased to state:—

(a) whether it has come to the notice of Government that the hardship is being caused to the poor patients who have to undergo Surgical Operations in the absence of glucose in many taluk Hospitals ;

(b) the action taken by Government in this behalf;

(c) whether a scheme to establish a glucose unit in Shimoga is under the consideration of Government;

(d) if so. when the unit will be established ?

SRI M. MALLAPPA (Minister for Health and Family Welfare)—

(a) Yes.

(b) Certain saline manufacturing units have been established at the district level in respect of glucose manufacturing and it is proposed to establish such units in certain other district centres. The glucose saline manufactured by these units are being supplied on indents received from the taluk level centres. Besides the district level authorities under their jurisdiction are empowered to purchase the medicines for use whenever it is necessary:

(c) Sanction has been accorded for the establishment of a glucose unit.

(d) The building works relating to the establishment of this glucose unit have not been completed. Permission is given to establish this unit temporarily in a portion of the premises of the hospital.

ಶ್ರೀ ಕಡಿದಾಳ್ ದಿವಾಕರ್.—ಕಡೆಗೂ ತೀರ್ಥಹಳ್ಳಿಗೆ ಆಗಬೇಕು ಎಂಬುದನ್ನು ಮನಗಂಡು ಮಂಜೂರಾತಿಯನ್ನು ಕೊಟ್ಟಿದ್ದೀರಿ. ಹಾಗೂ ಕಟ್ಟಡ ಇಲ್ಲದಿದ್ದರೂ ಸಧ್ಯಕ್ಕೆ ಇರುವ ಕಟ್ಟಡದಲ್ಲೇ ಸ್ಥಾಪನೆ ಮಾಡುತ್ತಿರುವುದು ಬಹಳ ಸಂತೋಷ. ಆದರೆ ಆ ಆಸ್ಪತ್ರೆಯಲ್ಲಿ ೬೦ ಬೆಡ್‌ಗಳು ಇವೆ. ಅಷ್ಟಕ್ಕೂ ಉಪಯೋಗವಾಗುವಂತೆ ಮಂಜೂರಾತಿಯನ್ನು ಕೊಟ್ಟಿದ್ದೀರೋ ಅಥವಾ ಅವರ ಬೇಡಿಕೆಗಿಂತ ಕಡಿಮೆ ಕೊಟ್ಟಿದ್ದೀರೋ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?